೫ ಹಾಸನದ ಸಹಾಯಕ ಶಿಕ್ಷಣಾಧಿಕಾರಿ ಶ್ರೀರಾಮಯ್ಯನವರನ್ನು ಅಮಾನತ್ತಿನಲ್ಲಿ ಇಡುವ ಬಗ್ಗೆ

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಸನ್ಮಾನ್ಯ ಅಧ್ಯಕ್ಷರೆ, ಹಾಸನದಲ್ಲಿ ಸಹಾಯಕ ಶಿಕ್ಷಣಾಧಿಕಾರಿ ಎಂದು ಕೆಲಸ ಮಾಡುತ್ತಿರುವ ಶ್ರೀ ರಾಮಯ್ಯ ಎಂಬುವರನ್ನು ಅಮಾನತ್‌ನಲ್ಲಿ ಇಡಲಾಗಿದೆ ಎಂಬಸಂಗತಿ ನನಗೆ ಗೊತ್ತಿದೆ. ಈ ವೇಳ್ಕಂಡ ರಾಮಯ್ಯನವರನ್ನು ಅವರ ದುರ್ನಡತೆಗಾಗಿ ಅಮಾನತ್ತಿನಲ್ಲಿಡಲು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರಾದ ಶ್ರೀ ವೈ.ಕೆ. ಪುಟ್ಟಸ್ವಾಮಿಗೌಡ, ಅವರು ತಮ್ಮ ೦೫-೧೧-೧೯೮೬ನೇ ಮತ್ತು ೦೫-೦೨-೧೯೮೭ರಂದು ಆದೇಶ ನೀಡಿದ್ದರೂ, ಶ್ರೀರಾಮಯ್ಯನವರಿಗೆ ಈ ಆಜ್ಞೆ ಜಾರಿಯಾಗದೆ ಅವರು ಕೆಲಸದಲ್ಲಿ ಮುಂದುವರಿದಿದ್ದಾರೆ ಇವರನ್ನು ಅಮಾನತ್ತಿನಲ್ಲಿಡಲು ಮಾನ್ಯ ಮುಖ್ಯ ಮಂತ್ರಿಗಳು ೨೩-೧೧-೧೯೮೬ರಂದು ಆಜ್ಞೆ ಮಾಡಿರುವುದು ಇಲ್ಲಿ ಗಮನಾರ್ಹ ಸಂಗತಿ. ಶ್ರೀ ರಾಮಯ್ಯನವರ ಮೇಲೆ ಅಂಚೆ ಇಲಾಖೆಯ ಆರ್.ಡಿ.ಅಕೌಂಟ್ಸ್‌ಗೆ ಸಂಬಂಧಿಸಿದಂತೆ ಶಿಕ್ಷಕರ ೮,೬೦೦ ರೂಪಾಯಿಗಳು ದುರುಪಯೋಗ ಮಾಡಿದ ನೇರವಾದ ಆಪಾದನೆ ಇದೆ. ಇದಲ್ಲದೆ ಶಿಕ್ಷಕರ ಭವನಕ್ಕೆ ಸಂಬಂಧಿಸಿದಂತೆ ೫೦,೦೦೦ ರೂ.ಗಳು ದುರುಪಯೋಗ ಮಾಡಿದ ಆಪಾದನೆಯೂ ಇದೆ. ಇಷ್ಟೇ ಅಲ್ಲದೆ ಶಿಕ್ಷಕರ ಆರ್.ಡಿ. ಮತ್ತು ರಾಷ್ಟ್ರೀಯ ಉಳಿತಾಯ ಹಣಕ್ಕೆ ಸಂಬಂಧಿಸಿದಂತೆ ೨,೦೦೦ ರೂ ಗಳನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಡಿ.ಡಿ.ಪಿ.ಐ. ಮತ್ತು ಮೇಲಿನ ಅಧಿಕಾರಿಗಳ ಅನುಮತಿ ಇಲ್ಲದೆ ಪರ್ಗಾವರ್ಗಿ ಮಾಡಿದ ಉದಾಹರಣೆಗಳಿವೆ. ಅಲ್ಲದೆ ಅವರ ಮೇಲೆ ಅನೇಕ ಲಂಚದ ಆಪಾದನೆಗಳಿವೆ. ಇಷ್ಟೆಲ್ಲ ಆಪಾದನೆಗಳಿದ್ದರೂ, ಇವರನ್ನು ಅಮಾನತ್ತಿನಲ್ಲಿಟ್ಟ ಆಜ್ಞೆ ಜಾರಿಗೆ ಬರದಿರಲು ಕಾರಣವೇನು ? ಕಾರಣ, ಇವರನ್ನು ಈಗಲಾದರೂ ಅಮಾನತ್ತಿನಲ್ಲಿಟ್ಟು ಆಯುಕ್ತರು, ಇವರ ಬಗ್ಗೆ ವಿಚಾರಣೆ ನಡೆಸಬೇಕು ಮಾನ್ಯ ಮುಖ್ಯ ಮಂತ್ರಿಗಳ ಆದೇಶದ ಮೇರೆಗೆ ಇವರ ವಿರುದ್ಧ ಪೋಲೀಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಲಂ ಆಯುಕ್ತರು ತಿಳಿಸಿದ್ದು ಆ ಕೆಲಸ ಕೂಡ ತೀವ್ರವಾಗಿ ಆಗಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಶಿಕ್ಷಣ ಸಚಿವರ ಗಮನ ಸೆಳೆಯು ಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದಕ್ಕೆ ಉತ್ತರ ಇನ್ನೂ ಬಂದಿಲ್ಲ. ಅದನ್ನು ನಂತರ ತರಿಸಿಕೊಡುತ್ತೇನೆ.

೬. ಸರ್ಕಾರಕ್ಕೆ ಚಲನಚಿತ್ರೋದ್ಯಮ ವಾಣಿಜ್ಯ ಮಂಡಳಿಯಂದರಂ ಮಾಡಿರಂವ ಮನವಿ.

† ಶ್ರೀ ಆರ್. ವೆಂಕಟರಾಮಯ್ಯ.—ಸನ್ಮಾನ್ಯ ಸಭಾಧ್ಯಕ್ಷರೆ, ಕರ್ನಾಟಕದಲ್ಲಿನ ಚಲನ ಚಿತ್ರೋದ್ಯಮದ ವಾಣಿಜ್ಯ ಮಂಡಳಿಯು ಸರ್ಕಾರಕ್ಕೆ ಮನವಿ ಕೊಟ್ಟು ಚಲನಚಿತ್ರೋದ್ಯಮದಲ್ಲಿನ ತೊಂದರೆಗಳನ್ನು ತೋಡಿಕೊಂಡಂ ''ಹಿಂದಿ ಚಲನಚಿತ್ರೋದ್ಯಮದಲ್ಲಿನಂತೆ'' ''ಗೋಡ್ ಬೋಲೆ'' ವರದಿತರ ಪರಿಹಾರ ಕೇಳಿದೆ. ಬೆಂಗಳೂರಿನಲ್ಲಿನ ಚಲನ ಚಿತ್ರೋದ್ಯಮ ಕ್ರೈಸಿಸ್‌ನಲ್ಲಿದ್ದು, ಆರಂ ಚಿತ್ರಮಂದಿರಗಳನ್ನು ಹೊಡೆದಿದ್ದು ಇನ್ನೂ ಹತ್ತಾರು ಚಿತ್ರಮಂದಿರಗಳನ್ನು ನೆಲಸಮ ಮಾಡಲಿದ್ದಾರೆ. ಸರ್ಕಾರ ಸೂಕ್ತ ಕ್ರಮ ಕೈಗೊಂಡು ಪರಿಹಾರ ಯೋಚಿಸದಿದ್ದಲ್ಲಿ ಇನ್ನೂ ಈ ಸಮಸ್ಯೆ ಬಿಗಡಾಯಿಸುವುದರಲ್ಲಿದೆ. ಸಿನಿಮಾ ಬಿಲ್ಡಿಂಗ್‌ಗಳನ್ನು ನೆಲಸಮ ಮಾಡುವುದನ್ನು ತಪ್ಪಿಸಬೇಕು ಮತ್ತು ಬೆಂಗಳೂರಿಗೆ ಚಲನ ಚಿತ್ರ ಕೈಗಾರಿಕೆಗೆ ಇರುವ ಒಂದು ಒಳ್ಳೆಯ ಹೆಸರನ್ನು ಕಾಪಾಡುವುದು ಮುಖ್ಯ. ಆದುದರಿಂದ ಈ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಲು ಅನುಮತಿ ಕೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಉತ್ತರ ಇನ್ನೂ ಬಂದಿಲ್ಲ. ಅದನ್ನು ನಂತರ ತರಿಸಿಕೊಡುತ್ತೇವೆ.

೭ ಕೊಡಗು ಜಿಲ್ಲೆಯಲ್ಲಿ ಎಂಟು ಖಾಸಗೀ ಕಾಲೇಜುಗಳಿಗೆ ಅನುದಾನ ಕೊಡದಿರುವುದು.

ಶ್ರೀಮತಿ ಸುಮಾ ವಸಂತ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಅನುದಾನ ಸಂಸ್ಥೆಯ ಮೇರೆಗೆ ಖಾಸಗಿ ಶಿಕ್ಷಣ ಸಂಸ್ಥೆಗಳು ಪ್ರಾರಂಭವಾದ ಐದು ವರ್ಷಗಳ ನಂತರ ಅನುದಾನ ನೀಡಲು ಅವಕಾಶವಿದೆ. ೧೯೮೫ರಂದು ಐದು ವರ್ಷಗಳು ಪೂರ್ಣವಾಗಿ ಕೊಡಗು ಜಿಲ್ಲೆಯ ೮ ಖಾಸಗೀ ಕಾಲೇಜುಗಳಿಗೆ ಈವರೆಗೂ ಅನುದಾನ ದೊರೆಯದಿದ್ದು ಇದರ ಪೈಕಿ ವಿರಾಜಪೇಟೆಯ ಕಾವೇರಿ ಮಹಿಳಾ ಕಾಲೇಜೂ ಸಹ ಒಂದಾಗಿದೆ ಅದನ್ನು ಕಾವೇರಿ ವಿದ್ಯಾ ಸಂಸ್ಥೆ ನಡೆಸುತ್ತಿರುವುದಲ್ಲದೆ ಇನ್ನೂ ಅನೇಕ ಶಾಲಾ ಕಾಲೇಜು ಗಳನ್ನು ನಡೆಸುತ್ತಿರುವುದರಿಂದ ಸದರಿ ಸಂಸೆ ಬಹಳ ತೊಂದರೆಗೊಳಗಾಗಿದೆ. ಆದಕಾರಣ ಕೂಡಲೇ